ESI.A.No.37/2021

AW-1,

ದಿನಾಂಕಃ 15-04-2025 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.

ಪಾಟೀ ಸವಾಲುಃ- ಎದುರುದಾರರ ಪರವಾಗಿಃ ಶ್ರೀ. SWK ವಕೀಲರಿಂದ

ನಾನು 2013-14 ರಿಂದ ಎಲೆಕ್ಟ್ರಿಕಲ್ ಸರ್ವೀಸ್ ಮಾಡುತ್ತಿದ್ದೇನೆ. ನಾನು ಇ ಎಸ್ ಐ ಕಾರ್ಪೋರೇಶನ್ನಿಂದ ಸ್ವಯಂಪ್ರೇರಿತವಾಗಿ ಇ ಎಸ್ ಐ ಕೋಡನ್ನು ಪಡೆದುಕೊಂಡಿದ್ದೇನೆ. ಇ ಎಸ್ ಐ ಕೋಡ್ ಪಡೆಯುವ ಸಮಯದಲ್ಲಿ ರೂಲ್ ಪ್ರಕಾರ 10 ಜನ ಕೆಲಸಗಾರರು ಇರಬೇಕೆಂದು ಹೇಳಿದ್ದರು ಆದ್ದರಿಂದ ಅದನ್ನು ತೋರಿಸಿದ್ದೆ. ಮಾರ್ಚ 2017 ರವರೆಗೆ ನಾನು 9 ಜನ ಕಾರ್ಮಿಕರಿಗೆ ಇ ಎಸ್ ಐ ವಂತಿಗೆಯನ್ನು ಪಾವತಿ ಮಾಡಿದ್ದೆ ಎಂದರೆ ನಿಜ. ಏಪ್ರಿಲ್-2017 ರಿಂದ ನಾನು ಇ ಎಸ್ ಐ ವಂತಿಗೆಯನ್ನು ಪಾವತಿ ಮಾಡುವುದನ್ನು ನಿಲ್ಲಿಸಿದೆ ಎಂದರೆ ನಿಜ. ಏಪ್ರಿಲ್ -2017 ರಲ್ಲಿ ದಾಖಲೆ ಪ್ರಕಾರ ನನ್ನ ಬಳಿ 9 ಜನ ಕೆಲಸಗಾರರು ಇದ್ದರು. ಏಪ್ರಿಲ್-2017 ರಿಂದ ಮೇ 2018 ರವರೆಗೆ ನಾನು ಇ ಎಸ್ ಐ ವಂತಿಗೆಯನ್ನು ಪಾವತಿ ಮಾಡಿಲ್ಲ ಎಂದು ನನಗೆ ನೋಟೀಸ್ ಬಂತು ಎಂದರೆ ನಿಜ. ಆ ನೋಟೀಸಿನಲ್ಲಿ ರೂ.94,595-00 ಗಳನ್ನು ಕಟ್ಟಬೇಕೆಂದು ಕೇಳಿದ್ದರು ಎಂದರೆ ನಿಜ. ದಿನಾಂಕಃ7-8-2018 ರಲ್ಲಿ ಖುದ್ದು ಸುನಾವಣೆಗೆ ಹಾಜರಾಗಿ ಅಟೆಂಡೆನ್ಸ ರಿಜಿಸ್ಟರ್, ವೇಜ್ ರಿಜಿಸ್ಟರ್, ಬುಕ್ ಆಫ್ ಅಕೌಂಟ್, ಕ್ಯಾಷ್ ಬುಕ್, ಆಡಿಟೆಡ್ ಬ್ಯಾಲೆನ್ಸ ಶೀಟ್ ಮತ್ತು ಪ್ರಾಫಿಟ್ ಅಂಡ್ ಲಾಸ್ ಅಕೌಂಟನ್ನು ಹಾಜರುಪಡಿಸಬೇಕೆಂದು ತಿಳಿಸಿದ್ದರು ಎಂದರೆ ನಿಜ. ಅವತ್ತು ನಾನು ಹಾಜರಾಗಿರಲಿಲ್ಲ ಆದ್ದರಿಂದ ದೂರವಾಣಿ ಕರೆ ಮಾಡಿ ದಿಃ4-9-2018 ರಂದು ಹಾಜರಾಗಬೇಕೆಂದು ತಿಳಿಸಿದ್ದರು ಎಂದರೆ ನಿಜ. ಆ ದಿನ ನಾನು ಅಟೆಂಡೆನ್ಸ ಮತ್ತು ವೇಜ್ ಶೀಟನ್ನು ಮಾತ್ರ ಹಾಜರುಮಾಡಿದ್ದೆ ಎಂದರೆ ನಿಜ. ಆನಂತರ 27-9-2018 ರಂದು ನನ್ನ ಕೋರಿಕೆಯ ಮೇರೆಗೆ ಇನ್ನೊಂದು ಸುನಾವಣಾ ದಿನಾಂಕವನ್ನು ನಿಗಧಿಪಡಿಸಿದರು ಎಂದರೆ ನಿಜ. ಆ ದಿನ ಪ್ರಾಫಿಟ್ ಅಂಡ್ ಲಾಸ್ ಅಕೌಂಟ್ ಬಿಟ್ಟು ಬೇರಾವುದೇ ದಾಖಲೆಗಳನ್ನು ನಾನು ಹಾಜರುಪಡಿಸಿರಲಿಲ್ಲ ಎಂಬುದು ನಿಜ. ಆದ್ದರಿಂದ ಡಿಫಾಲ್ಟ ಅವಧಿಗೆ ರೂ.94,595-00 ಗಳನ್ನು ಕಟ್ಟಬೇಕೆಂದು ಎದುರುದಾರರು ತೀರ್ಮಾನಿಸಿದರು ಎಂದರೆ ನಿಜ. ಈ ಅವಧಿಯಲ್ಲಿ ಬಡ್ಡಿ ಮತ್ತು ಡ್ಯಾಮೇಜಸ್ ಸೇರಿಸಿ ಒಟ್ಟು ರೂ.1,27,734-00 ಗಳನ್ನು ಕಟ್ಟಬೇಕೆಂದು ತಿಳಿಸಿದರು ಎಂದರೆ ನಿಜ. ನನಗೆ ತೋರಿಸಲಾಗುತ್ತಿರುವ ನಿಎ-8 ರಲ್ಲಿ ಕಂಡುಬರುವಂತೆ ಎದುರುದಾರರು ನೋಟೀಸ್ ಕೊಟ್ಟ ನಂತರ ನಾನು ಪಾವತಿ ಮಾಡಿದ್ದೇನೆ ಎಂದರೆ ನಿಜ. ಅದರಲ್ಲಿ ಹಣವನ್ನು ನಾನೇ ಲೆಕ್ಕಾಚಾರ ಹಾಕಿ ಪಾವತಿ ಮಾಡಿದ್ದೇನೆ ಎಂದರೆ ನಿಜ. ಅದರಲ್ಲಿ 9 ಜನ ಕೆಲಸಗಾರರಿಗೆ ಇ ಎಸ್ ಐ ವಂತಿಗೆಯನ್ನು ಪಾವತಿ ಮಾಡಿರಲಿಲ್ಲ ಎಂದರೆ ಸಾಕ್ಷಿಯು ನಾನು ನಿರಂತರವಾಗಿ 9 ಜನ ಕೆಲಸಗಾರರನ್ನು ಇಟ್ಟುಕೊಂಡಿರಲಿಲ್ಲ ಆಯಾ ಸಮಯದಲ್ಲಿ ಇಟ್ಟುಕೊಂಡಿದ್ದ ಕೆಲಸಗಾರರಿಗೆ

ESI.A.No.37/2021

AW-1,

ಸಂಬಂಧಿಸಿದಂತೆ ವಂತಿಗೆಯನ್ನು ಪಾವತಿ ಮಾಡಿದ್ದೇನೆ ಎಂದು ನುಡಿಯುತ್ತಾರೆ. ಅಟೆಂಡೆನ್ಸ ರಿಜಿಸ್ಟರಿನಲ್ಲಿ ಅವರ ಹೆಸರುಗಳು ಮುಂದುವರೆದಿವೆ ಎಂದರೆ ನಿಜ ಆದರೆ ಅವರು ಕೆಲಸ ಮಾಡಿಲ್ಲ. ನಾನು ಹಾಜರುಪಡಿಸಿದ ಅಟೆಂಡೆನ್ಸ ರಿಜಿಸ್ಟರ್ ಮತ್ತು ಪೇಮೆಂಟ್ ರಿಜಿಸ್ಟರುಗಳನ್ನು ನಾನೇ ಸೃಷ್ಟಿ ಮಾಡಿ ಹಾಜರು ಮಾಡಿದ್ದೇನೆ ಎಂದರೆ ಸರಿಯಲ್ಲ. ನಾನು ತೋರಿಸಿರುವ ವೇಜ್ ರಿಜಿಸ್ಟರಿನಲ್ಲಿರುವ ಸಂಬಳಕ್ಕೂ ಮತ್ತು ಫ್ರಾಫಿಟ್ ಅಂಡ್ ಲಾಸ್ ಅಕೌಂಟಿನಲ್ಲಿ ಕಂಡುಬರುವ ಸಂಬಳಕ್ಕೂ ವ್ಯತ್ಯಾಸವಿದೆ ಎಂದರೆ ಸರಿಯಲ್ಲ. ನಾನು ಇ ಎಸ್ ಐ ವಂತಿಗೆಯನ್ನು ಕೊಡುವುದನ್ನು ತಪ್ಪಿಸಲು ಸುಳ್ಳು ದಾಖಲಾತಿಗಳನ್ನು ಸೃಷ್ಟಿಸಿದ್ದೇನೆ ಎಂದರೆ ಸರಿಯಲ್ಲ. ಈಗಲೂ ನಮ್ಮ ಸಂಸ್ಥೆ ಅಸ್ತಿತ್ವದಲ್ಲಿ ಇದೆ ಎಂದರೆ ನಿಜ. ನನ್ನ ಸಂಸ್ಥೆಯಲ್ಲಿ ಕೆಲಸಗಾರರನ್ನು ಕಡಿತಗೊಳಿಸಿದ ಬಗ್ಗೆ ಇ ಎಸ್ ಐ ಸಂಸ್ಥೆಗೆ ತಿಳಿಸಿಲ್ಲ ಎಂದರೆ ನಿಜ. ಅದನ್ನು ತಿಳಿಸಲು ತೊಂದರೆ ಇರಲಿಲ್ಲ.

ಮರು ವಿಚಾರಣೆಃ ಇಲ್ಲ

(ಸಾಕ್ಷಿಯು ಕೊಟ್ಟ ಸಾಕ್ಷ್ಯವನ್ನು ನನ್ನ ಉಕ್ತ ಲೇಖನದಂತೆ ಬಹಿರಂಗ ನ್ಯಾಯಾಲಯದಲ್ಲಿ ಗಣಕೀಕರಿಸಲಾಯಿತು.)

(ಮೇಲಿನ ಸಾಕ್ಷ್ಯವನ್ನು ಸಾಕ್ಷಿಗೆ ಓದಿ , ತಿಳಿಸಿ , ಹೇಳಿದಾಗ ಅವರು ಸರಿ ಇದೆ ಎಂದು ಒಪ್ಪಿದ್ದಾರೆ).

(ರುಡೋಲ್ಫ್ ಪಿರೇರಾ),
ಅಧ್ಯಕ್ಷಾಧಿಕಾರಿಗಳು/ಜಡ್ಜ್
ಇ.ಎಸ್.ಐ.ನ್ಯಾಯಾಲಯ,
ಮೈಸೂರು.